



ಹಿಮಾಲಯದ ಹಾದಿಯಲ್ಲಿ ನದಿಯ ಸಾಂಗತ್ಯ



ಪಾದುಮ್ ಹೋಟೆಲಿನಲ್ಲಿ ವಸತಿ ಹೂಡಿ, ಬಿಸಿ ನೀರಿನ ದೀರ್ಘ ಸ್ನಾನ ಮಾಡಿದಾಗಲೇ ದೂಳು, ಸುಸ್ತು, ಚಳಿಯಿಂದ ಬಿಡುಗಡೆ. ಊಟದ ನಂತರ, ನಮ್ಮಲ್ಲಿ ಅತ್ಯಂತ ಗಟ್ಟಿಗನಾದ ಜೋರ್ಡನ್‌ಗೆ ದಿಢೀರ್ ವಾಂತಿ ಶುರುವಾಯಿತು. ಮರುದಿನ ಸೈಕಲ್ ಪಯಣಕ್ಕೆ ರಜೆ ಹಾಕಿ, ಪಾದುಮ್‌ನಲ್ಲೇ ನಿಲ್ಲಲು ನಿರ್ಧರಿಸಿದೆವು.

ಮರುದಿನ ಜೋರ್ಡನ್ ಚೇತರಿಸಿಕೊಂಡಿದ್ದ. ದೂಳು, ಕೆಸರು ಮೆತ್ತಿದ್ದ ಸೈಕಲುಗಳನ್ನು ನೀಟಾಗಿ ತೊಳೆದು ಪಾದುಮ್ ನಗರ ಪ್ರದಕ್ಷಿಣೆ ಮಾಡಿದೆವು. ಬೌದ್ಧಗುರು ಪದ್ಮಸಂಭವನ ನೆನಪಿನಲ್ಲಿ ಹೆಸರಿಟ್ಟ ಪಾದುಮ್ ಸಣ್ಣ, ಸುಂದರ ನಗರ. ಝನ್ಸ್‌ಕಾರ್ ಪ್ರಾಂತ್ಯದ ಆಡಳಿತ ಕೇಂದ್ರ ಕೂಡ. ಊರಿನಲ್ಲಿ ಹಲವು ಬೌದ್ಧ ಸ್ತೂಪಗಳಿವೆ.

## ಸಾಮರ್ಥ್ಯಕ್ಕೆ ಸವಾಲಿನ ಹಾದಿ

ಪಾದುಮ್ ನಂತರ, ನಮ್ಮ ಯಾತ್ರೆಯ ಕೊನೆಯ ಹಂತಕ್ಕೆ ತಯಾರಾದೆವು. ಮೊದಲ ಗುರಿ, 45 ಕಿ.ಮೀ. ದೂರದ ಪುರ್ನೆ ಹಳ್ಳಿ ಮುಟ್ಟುವುದು. ಈ ದಾರಿ ನಮ್ಮೆಲ್ಲ ಚಾಕಚಕ್ಯತೆಯನ್ನು ಪರೀಕ್ಷೆಗೊಡ್ಡಿತು. ಬಹು ಶ್ರಮದಿಂದ ಪುರ್ನೆ ಮುಟ್ಟಿ ಹೋಮ್ ಸ್ಟೇಯಲ್ಲಿ ತಂಗಿದೆವು. ಅಲ್ಲಿಂದ ಕಾಲ್ನಡಿಗೆಯಲ್ಲಿ ಸರ್ಪ್ ನದಿ ಮೇಲಿನ ಹಳೆ ಕಬ್ಬಿಣದ ಸೇತುವೆ ದಾಟಿದರೆ ಫುಗ್‌ತಾಲ್ ಬೌದ್ಧಧಾಮ ಸಿಗುತ್ತದೆ. ಅಲ್ಲಿಂದ ಮುಂದೆ ಸಿಗುವ ಶಿಂಕುಲಾ ಕಣಿವೆ, ನಮ್ಮಿಡೀ ದಾರಿಯಲ್ಲೇ ಅತ್ಯಂತ ಎತ್ತರದಲ್ಲಿದ್ದು (16,615 ಅಡಿ), ಅದನ್ನು ತಲುಪಲು ಪರ್ನೆಯಿಂದ 60 ಕಿ.ಮೀ. ಎತ್ತರಕ್ಕೆ ಏರಬೇಕಿತ್ತು. ಇದನ್ನು ಎರಡು ದಿವಸದಲ್ಲಿ ಕ್ರಮಿಸಲು ನಿರ್ಧರಿಸಿ, ಪುರ್ನೆ–ಶಿಂಕುಲಾ ನಡುವಿನ ಗೊಮ್‌ಬೋರಂಜನ್‌ಗೆ ಹೊರಟೆವು.

ದಾರಿಯೇ ಇಲ್ಲದ ದಾರಿಯಲ್ಲಿ ಹತ್ತು ಹಲವು ಕಡೆ ದಾರಿ ಮೇಲೆ ನೀರಿನ ಝರಿಗಳನ್ನು ದಾಟುತ್ತ ಅಲ್ಲಲ್ಲಿ ನಿಂತು, ಒಬ್ಬರಿಗೊಬ್ಬರು ಹುರುಪಿಸಿ, ಮುಂದುವರಿದೆವು. ಗೊಮ್‌ಬೋರಂಜನ್‌ನ ಕಡೆಯ 10 ಕಿ.ಮೀ. ಎಷ್ಟು ಕಠಿಣವಾಗಿತ್ತೆಂದರೆ, ಅದನ್ನು ದಾಟಲು ನಮಗೆ ಮೂರು ಗಂಟೆಗಳೇ ಬೇಕಾದವು. ಗೊಮ್‌ಬೋರಂಜನ್ ಕ್ಯಾಂಪ್ ಮುಟ್ಟಿದಾಗ ದಿನ ಕೊನೆಯಾಗುತ್ತಿತ್ತು. ತೀವ್ರ ಚಳಿ ನಡುವೆ ರಾತ್ರಿ ಕಳೆದು ಶಿಂಕುಲಾ ಹತ್ತುವ ಕೊನೆಯ ಸವಾಲಿಗೆ ಸಿದ್ಧರಾದೆವು.

## ಶಿಂಕುಲಾ ನಮ್ಮದಾಯಿತು

ಶಿಂಕುಲಾ ಕಣಿವೆ ಲಡಾಖ್ ಅನ್ನು ಹಿಮಾಚಲ ಪ್ರದೇಶಕ್ಕೆ ಜೋಡಿಸುತ್ತದೆ. ಬೆಳ್ಳಂಬೆಳಿಗ್ಗೆ, ನಮ್ಮ ಕ್ಯಾಂಪಿನ ಆತಿಥೇಯ ಆಮ್‌ದೋ ತಯಾರಿಸಿಕೊಟ್ಟ ಬಿಸಿ ಚಹಾ ಕುಡಿದು, ಶಿಂಕುಲಾ ದಾರಿ ಹಿಡಿದೆವು. ಸಂಪೂರ್ಣ ಹಾಳು ಬಿದ್ದ ರಸ್ತೆ. ಹಿಮ ಕರಗಿ ರಸ್ತೆ ಮೇಲೆ ಹರಿಯುವ ನೀರಿನಿಂದ ಏರುವಿಕೆ ಸುಲಭವಾಗಿರಲಿಲ್ಲ. ಪಟ್ಟುಬಿಡದೆ ಏರುತ್ತ ಇಳಿಯುತ್ತ, ತುಳಿಯುತ್ತ ತಳ್ಳುತ್ತ ಮೇಲೆ ಏರಿದೆವು. ಮಂಜು ಕಲ್ಲಿನ ಸುತ್ತಲಿನ ಪ್ರಕೃತಿ ರುದ್ರರಮಣೀಯ. ಸುಮಾರು 5 ಗಂಟೆಗಳ ಪ್ರಯಾಣದ ನಂತರ ಕೊನೆಗೂ 16,000 ಅಡಿಗಳ ಶಿಂಕುಲಾ ನಮ್ಮದಾಯಿತು.

ಗುರಿ ತಲುಪಿದ ಖುಷಿಯಲ್ಲಿ ಒಬ್ಬರಿಗೊಬ್ಬರು ಅಭಿನಂದಿಸುತ್ತ, ಮ್ಯಾಗಿ ನೂಡಲ್ಸ್, ಬಿಸಿ ಚಹಾದೊಟ್ಟಿಗೆ ಸಂಭ್ರಮಾಚರಣೆ ಮಾಡಿದೆವು. ವಿಜಯದ ನಗೆ ಬೀರುತ್ತ, ಶಿಂಕುಲಾ ಫಲಕದ ಮುಂದೆ ನಿಂತು ಅಪರೂಪದ ಆ ರೋಮಾಂಚಕ ಗಳಿಗೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿದೆವು.

ಶಿಂಕುಲಾದಿಂದ ಹಿಮಾಚಲ ಪ್ರದೇಶಕ್ಕೆ ಇಳಿಯುವ ದಾರಿ ಸುಮಾರಾಗಿತ್ತು. ಭಯಂಕರ ದಾರಿಗಳನ್ನು ದಾಟಿದ ನಮಗೆ, ಇದು ರಾಜ ಮಾರ್ಗದಂತೆ ಕಂಡು ಸಂಜೆಯೊಳಗೆ ದಾರ್ಛಾ ಗ್ರಾಮ ತಲುಪಿ, ನಮ್ಮ ಸೈಕಲ್ ಯಾತ್ರೆ ಕೊನೆಗೊಳಿಸಿದೆವು. ಅಲ್ಲಿಂದ ಒಂದು ಲಾರಿಯಲ್ಲಿ ಸೈಕಲುಗಳ ಸಮೇತ ಗಂಟೆಗಳಲ್ಲಿ ಮನಾಲಿ ಮುಟ್ಟಿದೆವು.

ಬೆಚ್ಚಗಿನ ಸ್ನಾನ, ಬಿಸಿ ಊಟದೊಂದಿಗೆ, ಕಳೆದ ದಿನಗಳನ್ನು ನೆನಪಿಸುತ್ತ ನಿದ್ದೆಗೆ ಜಾರಿದೆವು. ಮರುದಿನ, ನಮ್ಮೆಲ್ಲಾ ಸೈಕಲುಗಳನ್ನು ಪ್ಯಾಕ್ ಮಾಡಿಸಿ, ಎಲ್ಲೂ ಕೈ ಬಿಡದ ಅವುಗಳಿಗೆ ಧನ್ಯವಾದ ಹೇಳುತ್ತಾ ಸಾರಿಗೆ ಸಂಸ್ಥೆಯೊಂದರ ಮುಖಾಂತರ ಬೆಂಗಳೂರಿಗೆ ರವಾನಿಸಿದೆವು. ಅದೇ ದಿನ ನಮ್ಮ ಊರುಗಳಿಗೆ ಮರಳಲು ಸಿದ್ಧರಾದೆವು. 12 ದಿನಗಳ ಕಷ್ಟಸುಖ, ಮೋಜುಮಸ್ತಿ, ಸಾಹಸದಂಥ ಅಪರೂಪದ ಅನುಭವಗಳಿಂದ ಅವರೆಲ್ಲರೂ ಜೀವದ ಗೆಳೆಯರಾಗಿದ್ದರು. ನನ್ನ ವಿದ್ಯಾರ್ಥಿಗಳ ಸಾಧನೆಗೆ ಭಾವುಕನಾಗಿ ಅವರ ಬೆನ್ನು ತಟ್ಟಿದೆ.

ಪ್ರತಿಕ್ರಿಯಿಸಿ: feedback@sudha.co.in